# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು-572 103

ಸಂಖ್ಯೆ:ತುವಿ:ಸಿಬ್ಬಂದಿ:2035:2024-25/385 ದಿನಾಂಕ:17.05.2025

## : ಸುತ್ತೋಲೆ :

ವಿಷಯ: ಪರಿಶಿಷ್ಟ ಜಾತಿಗಳಲ್ಲಿನ ಉಪ ಜಾತಿ ಪ್ರಮಾಣ ಪತ್ರ ಸಲ್ಲಿಸುವ ಕುರಿತು.

ಉಲ್ಲೇಖ: 01. ಸಂ.ನ್ಯಾಹೆಚ್ ಏಸಾ/ಸಕ ಇ/2025 ದಿನಾಂಕ:14.02.2025
02.ಈ ಕಚೇರಿ ಆದೇಶ ಸಂಖ್ಯೆ:ತುವಿ:ಸಿಬ್ಬಂದಿ:2465:2024-25/3736 ದಿನಾಂಕ:06.03.2025
03. ಡಾ.ಮಹಾಲಿಂಗ ಕೆ, ನೋಡಲ್ ಅಧಿಕಾರಿಗಳು ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗಗಳ ಕೋಶ ಇವರ ಪತ್ರ ದಿನಾಂಕ:05.04.2025.
04. ಸರ್ಕಾರದ ಪತ್ರ ಸಂಖ್ಯೆ:ಇಡಿ 44 ವಿವಿಧ 2025 ದಿನಾಂಕ:28.04.2025

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಪತ್ರದಲ್ಲಿ ಗೌರವಾನ್ವಿತ ನ್ಯಾಯ ಮೂರ್ತಿಗಳಾದ ಶ್ರೀ ಹೆಚ್.ಎನ್. ನಾಗಮೋಹನ್ ದಾಸ್, ಏಕಸದಸ್ಯ ವಿಚಾರಣಾ ಆಯೋಗಕ್ಕೆ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿಯ ಖಾಯಂ ಬೋಧಕ/ಬೋಧಕೇತರರು ಉದ್ಯೋಗಕ್ಕೆ ಸೇರಿದ ಸಂದರ್ಭದಲ್ಲಿ ಹಾಗೂ ಎಲ್ಲಾ ಪದವಿ ಹಾಗೂ ಸ್ನಾತಕೋತ್ತರ ಪದವಿ ಕೋರ್ಸಗಳಲ್ಲಿ ವ್ಯಾಸಂಗಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ದಾಖಲಾತಿಯ ಸಂದರ್ಭದಲ್ಲಿ ಸಲ್ಲಿಸಿದ ಜಾತಿ ಪ್ರಮಾಣ ಪತ್ರದನ್ವಯ 101 ಪರಿಶಿಷ್ಟ ಜಾತಿಗಳಲ್ಲಿ ಉಪ ಜಾತಿಯ ಹೆಸರು ಹಾಗೂ ಆದಿ ಕರ್ನಾಟಕ, ಆದಿ ದ್ರಾವಿಡ, ಮತ್ತು ಆದಿ ಆಂಧ್ರ ವರ್ಗಗಳಿಗೆ ಸೇರಿದ್ದಲ್ಲಿ ಮೂಲ ಜಾತಿಯನ್ನು ಹಾಗೂ ಉಪ ಜಾತಿ ಪ್ರಮಾಣ ಪತ್ರಗಳ ಮಾಹಿತಿ ಸಂಗ್ರಹಿಸಿ ವೆಬ್ ಪೋರ್ಟಲ್ ನಲ್ಲಿ ಅಪಲೋಡ್ ಮಾಡಲು ನೋಡಲ್ ಆಫೀಸರ್ ನೇಮಿಸುವಂತೆ ತಿಳಿಸಲಾಗಿರುತ್ತದೆ.

ಈ ಹಿನ್ನಲೆ ಉಲ್ಲೇಖ(2) ರಲ್ಲಿ **ಡಾ. ಮಹಾಲಿಂಗ ಕೆ, ಸಹ ಪ್ರಾಧ್ಯಾಪಕರು ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರನ್ನು ಪರಿಶಿಷ್ಟ ಜಾತಿಯ ಒಳ ಮೀಸಲಾತಿಯ ಮಾಹಿತಿಯನ್ನು ವಿಚಾರಣಾ ಆಯೋಗಕ್ಕೆ ಒದಗಿಸುವ ಸಂಬಂಧ ವಿಶ್ವವಿದ್ಯಾನಿಲಯದ ಹಂತದಲ್ಲಿ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ.**

ಪ್ರಸ್ತುತ ಉಲ್ಲೇಖ(4) ರಲ್ಲಿ ಗೌರವಾನ್ವಿತ ನ್ಯಾಯ ಮೂರ್ತಿಗಳಾದ ಶ್ರೀ ಹೆಚ್.ಎನ್. ನಾಗಮೋಹನ್ ದಾಸ್, ಏಕಸದಸ್ಯ ವಿಚಾರಣಾ ಆಯೋಗಕ್ಕೆ ತುರ್ತಾಗಿ ಸದರಿ ಮಾಹಿತಿ ಒದಗಿಸಬೇಕಾಗಿರುವ ಸಂಬಂಧ ತಕ್ಷಣವೇ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿಗೆ ಸೇರಿದ ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ತಮ್ಮ ಮೂಲಜಾತಿ ಹಾಗೂ ಉಪಜಾತಿ ಪ್ರಮಾಣ ಪತ್ರವನ್ನು **ನಿಗದಿತ ನಮೂನೆಯಲ್ಲಿ ಭರ್ತಿಮಾಡಿ ಇಂದೇ ಡಾ. ಮಹಾಲಿಂಗ ಕೆ, ನೋಡಲ್ ಅಧಿಕಾರಿಗಳು/ಸಂಪರ್ಕಾಧಿಕಾರಿಗಳು, ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗಗಳ ಕೋಶದ ಮೇಲ್-ಐಡಿ** scstcelltut92@gmail.com ಇಲ್ಲಿ ನೇರವಾಗಿ ಸಲ್ಲಿಸಲು ತಿಳಿಸಲಾಗಿದೆ.

ಈ ವಿಷಯವನ್ನು ಅತ್ಯಂತ ತುರ್ತು ಎಂದು ಪರಿಗಣಿಸುವುದು.

**ಅಡಕ:ನಿಗದಿತ ನಮೂನೆ**

"ಕರಡು ಪ್ರತಿ ಮಾನ್ಯ ಕುಲಸಚಿವರಿಂದ ಅನುಮೋದಿಸಲ್ಪಟ್ಟಿದೆ."

ಆದೇಶದ ಮೇರೆಗೆ,

ಉಪಕುಲಸಚಿವರು
(ಸಿಬ್ಬಂದಿ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.

ಪ್ರತಿ:

1. ಡಾ. ಮಹಾಲಿಂಗ ಕೆ, ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಹಾಗೂ ನೋಡಲ್ ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ.
2. ಕಚೇರಿ ಪ್ರತಿ

# ನಮೂನೆ-1

| ಕ್ರ. ಸಂ. | ಪರಿಶಿಷ್ಟ ಜಾತಿಯ ಅಧಿಕಾರಿ/ ಸಿಬ್ಬಂದಿಯ ಹೆಸರು | ಕೆ.ಜಿ.ಐ.ಡಿ ಸಂಖ್ಯೆ | ಗ್ರೂಪ್- ಎ,ಬಿ,ಸಿ & ಡಿ ವೃಂದಾವಾರು | ಅಧಿಕಾರಿ/ ಸಿಬ್ಬಂದಿಗಳು ಉದ್ಯೋಗಕ್ಕೆ ಸೇರಿದ ಸಂದರ್ಭದಲ್ಲಿ ಸಲ್ಲಿಸಿದ ಜಾತಿ ಪ್ರಮಾಣ ಪತ್ರದನ್ವಯ 101 ಪರಿಶಿಷ್ಟ ಜಾತಿಗಳಲ್ಲಿ ಉಪ ಜಾತಿಯ ಹೆಸರು. | ಒಂದು ವೇಳೆ AK/AD/AA ಜಾತಿಗಳಿಗೆ ಸೇರಿದ್ದಲ್ಲಿ ಅದರೊಳಗಿನ ಮೂಲ ಜಾತಿಯನ್ನು ನಮೂದಿಸತಕ್ಕದ್ದು. |
|---|---|---|---|---|---|
| | | | | | |